SINDHI HIGH SCHOOL, BENGALURU
ANNUAL EXAMINATION ( 2022 – 23 )
SUBJECT – L 2 KANNADA

Class: VII
Date: 27-3-2023
No. of Sides : 10

Max Marks : 80
Reading time : 8:00am – 8:15am
Writing Time : 8:15am – 10:45am

ಸೂಚನೆಗಳು:

* ಪತ್ರಿಕೆಯು A ಮತ್ತು B ಎಂಬ ಎರಡು ಭಾಗಗಳನ್ನು ಒಳಗೊಂಡಿರುತ್ತವೆ.
* ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 12 ಮುಖ್ಯ ಪ್ರಶ್ನೆಗಳಿರುತ್ತವೆ.
* ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಕ್ರಮವಾಗಿ ಉತ್ತರಿಸಿ.
* ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.
* ಎರಡೂ ಭಾಗಗಳ ಪ್ರಶ್ನೆಗಳಿಗೂ ಉತ್ತರಿಸುವುದು ಕಡ್ಡಾಯ.

| | | |
|---|---|---|
| ಭಾಗ- A (40 ಅಂಕಗಳು) | ವಾಚನ ಮತ್ತು ಗ್ರಹಿಕಾ ಕೌಶಲ್ಯ | 10 ಅಂಕಗಳು |
| | ಅನ್ವಯಿಕ ವ್ಯಾಕರಣ | 16 ಅಂಕಗಳು |
| | ಪಠಿತ ಗದ್ಯ – ಪದ್ಯ ಅಧ್ಯಯನ ಬಹುಆಯ್ಕೆ ಪ್ರಶ್ನೆ | 14 ಅಂಕಗಳು |
| ಭಾಗ- B (40 ಅಂಕಗಳು) | ಬರವಣಿಗೆಕೌಶಲ್ಯ | 12 ಅಂಕಗಳು |
| | ಪಠ್ಯಗಳಅಧ್ಯಯನ | 28 ಅಂಕಗಳು |
| | ಒಟ್ಟುಅಂಕಗಳು | 80 ಅಂಕಗಳು |

## ಭಾಗ – A ( 40 ಅಂಕಗಳು)

### ( ವಾಚನ ಮತ್ತು ಗ್ರಹಿಕಾ ಕೌಶಲ್ಯ - 10 ಅಂಕಗಳು )

**I.** (ಅ) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (1x5=5)

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. ತೇಜಸ್ವಿ ಕನ್ನಡ ನವ್ಯ ಸಾಹಿತ್ಯದ ಪ್ರಮುಖ ಲೇಖಕ ಹಾಗೂ ಸ್ವಾತಂತ್ರ್ಯ ಪ್ರವೃತ್ತಿಯ ಬರಹಗಾರರು. ನವ್ಯ ಸಾಹಿತ್ಯದ ಕಾಲಘಟ್ಟದಲ್ಲಿ ಪ್ರಮುಖವಾಗಿ ಕೇಳಿ ಬಂದ ಹೆಸರು ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನದ ಮೂಲಕ ಬಂಡಾಯ ಸಾಹಿತ್ಯವನ್ನು ಪ್ರಾರಂಭಿಸಿದರು. ತೇಜಸ್ವಿ ಆರಂಭದಲ್ಲಿ ಬೇರೊಂದು ಹೆಸರಿನಲ್ಲಿ ಕಾವ್ಯ ರಚನೆ ಮಾಡಿದ್ದರು. ನಂತರ ಕಥಾ ಸಾಹಿತ್ಯ,ಕಾದಂಬರಿ, ಲೇಖನಗಳ ಕಡೆ ಹೆಚ್ಚಿನ ಗಮನ ಹರಿಸಿದರು .

ತೇಜಸ್ವಿ ಅವರು ರಾಷ್ಟ್ರಕವಿ ಕುವೆಂಪು ಅವರ ಪುತ್ರ. ಅವರ ತಾಯಿ ಹೇಮಾವತಿ. ತೇಜಸ್ವಿ ಅವರು 1938 ಸೆಪ್ಟಂಬರ್ 8 ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಪದವಿ ಪಡೆದ ನಂತರ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ ಪದವಿಯನ್ನು ಪಡೆದರು. ಇವರ ಮೊದಲ ಕಥೆ ಲಿಂಗ ಬಂದ. ಈ ಕಥೆಗಾಗಿ ಅವರು ರಾಜ್ಯೋತ್ಸವ ಪ್ರಶಸ್ತಿ ಪಡೆದರು . ಸ್ನಾತಕೋತ್ತರ ಪದವಿಯ ನಂತರ ಓರಗೆಯ ಇತರೆ ಬರಹಗಾರರಂತೆ ಅಧ್ಯಾಪಕ ವೃತ್ತಿಯನ್ನು ಬಯಸದೆ ಮಲೆನಾಡಿನ ಮೂಡಿಗೆರೆಯಲ್ಲಿ ಕೃಷಿಯನ್ನು ಮಾಡುವ ಮಹತ್ವದ ನಿರ್ಧಾರವನ್ನು ಮಾಡಿದರು . ಕೃಷಿಯ ಜೊತೆ ಜೊತೆಗೆ ಅಗಾಧವಾದ ಸಾಹಿತ್ಯದ ಕೃಷಿ ಮಾಡಿದರು. ಸಾಹಿತ್ಯದ ಜೊತೆಗೆ ಇವರಿಗೆ ವ್ಯವಸಾಯ, ಛಾಯಾಚಿತ್ರಗ್ರಹಣ ಹಾಗೂ ಬೇಟೆಯಲ್ಲಿ ಆಸಕ್ತಿ ಇತ್ತು. ಇವರು ರೈತ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕವಿತೆ, ನಾಟಕ, ಕಾದಂಬರಿ, ಕಥೆ, ಮೊದಲಾದ ಸಾಹಿತ್ಯಕ ಪ್ರಕಾರಗಳಲ್ಲಿ ಬರೆದಿದ್ದಾರೆ.

ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್ ಮುಂತಾದ ಕಾದಂಬರಿಗಳನ್ನು, ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು , ಕಿರಗೂರಿನ ಗಯ್ಯಾಳಿಗಳು ಇವರು ಬರೆದ ಪ್ರಮುಖ ಕಥಾ ಸಂಕಲನಗಳು. ಪೂರ್ಣ ಚಂದ್ರ ತೇಜಸ್ವಿಯವರ ಅಬಚೂರಿನ ಪೋಸ್ಟಾಫೀಸು , ತಬರನ ಕಥೆ, ಹಾಗೂ ಕಿರಗೂರಿನ ಗಯ್ಯಾಳಿಗಳು ಕೃತಿಗಳು ಚಲನಚಿತ್ರಗಳಾಗಿವೆ. ಇವರು ಬರೆದ ಚಿದಂಬರ ರಹಸ್ಯ ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹಲವಾರು ಆಂಗ್ಲ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ನಾಲ್ಕು ದಶಕಗಳ ಕಾಲ ಕಥೆ, ಕಾದಂಬರಿಗಳ ಮೂಲಕ, ವಿಜ್ಞಾನದ ವಿಸ್ಮಯಗಳ ಮೂಲಕ ತೇಜಸ್ವಿಯವರು ಕನ್ನಡ ಸಾಹಿತ್ಯಕ್ಕೆ ಅನೇಕ ಮಹತ್ವಪೂರ್ಣ ಕೃತಿಗಳನ್ನು ನೀಡಿದ್ದಾರೆ.

ಪ್ರಶ್ನೆಗಳು:

**1. ತೇಜಸ್ವಿ ಅವರ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ.**

1. ಕರ್ವಾಲೋ 2. ಚಿದಂಬರ ರಹಸ್ಯ 3. ತಬರನ ಕಥೆ 4. ಜುಗಾರಿ ಕ್ರಾಸ್

**2. ತೇಜಸ್ವಿ ಅವರ ಹುಟ್ಟೂರು**

1. ತೀರ್ಥಹಳ್ಳಿಯ ಕುಪ್ಪಳ್ಳಿ 2. ತೀರ್ಥಹಳ್ಳಿಯ ಮೇಳಿಗೆ
3. ತೀರ್ಥಹಳ್ಳಿಯ ದುರ್ವಾಸಪುರ 4. ತೀರ್ಥಹಳ್ಳಿಯ ಭಾರತೀಪುರ

**3. ತೇಜಸ್ವಿಯವರು ಬರೆದ ಮೊದಲ ಕಥೆ ಇದು**

1. ಕರ್ವಾಲೋ 2. ಹುಲಿಯೂರಿನ ಸರಹದ್ದು
3. ಅಬಚೂರಿನ ಪೋಸ್ಟಾಫೀಸು 4. ಲಿಂಗ ಬಂದ

**4. ತೇಜಸ್ವಿ ಅವರು ಇವರ ಮಗ**

1. ದತ್ತಾತ್ರೇಯ ರಾಮಚಂದ್ರ ಬೇಂದ್ರೆ 2. ಶಿವರಾಮ ಕಾರಂತ
3. ಕುವೆಂಪು. 4. ಮಾಸ್ತಿ ವೆಂಕಟೇಶ ಅಯ್ಯಂಗಾರ್

**5.** ತೇಜಸ್ವಿಯವರು ಸ್ನಾತಕೋತ್ತರ ಪದವಿಯ ನಂತರ ಬಯಸದೆ ಇದ್ದ ವೃತ್ತಿ ಇದು.

1. ಅಧ್ಯಾಪಕ 2. ನಾಟಕ 3. ಸಿನಿಮಾ 4. ವ್ಯಾಪಾರ

**(ಆ)** ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ . (1x5=5)

ಸ್ವಚ್ಛ ಭಾರತ ಆಂದೋಲನವನು 2019 ರಲ್ಲಿ ನಡೆದಿರುವ ಮಹಾತ್ಮಗಾಂಧಿಯವರ 150ನೇ ಜನ್ಮಜಯಂತಿಗೆ ದೇಶವು ಸಲ್ಲಿಸಬಹುದಾದ ಅತಿದೊಡ್ಡ ಕೃತಜ್ಞತೆಯಾಗಿದೆ. 2014ರ ಅಕ್ಟೋಬರ್ 2ರಂದು ಸ್ವಚ್ಛ ಭಾರತ ಅಭಿಯಾನಕ್ಕೆ ರಾಜಪಥದಲ್ಲಿ ಚಾಲನೆ ನೀಡಿದ ಬಳಿಕ ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿಯವರು ಹೇಳಿದ ಮಾತಿದು. ಸ್ವಚ್ಛ ಭಾರತ ಅಭಿಯಾನವನ್ನು ದೇಶದ ಉದ್ದಗಲಕ್ಕೂ ರಾಷ್ಟ್ರೀಯ ಚಳುವಳಿ ರೂಪದಲ್ಲಿ ಜಾರಿಗೆ ತರಲಾಗುತ್ತಿದೆ.

ಈ ಸಾಮೂಹಿಕ ಅಭಿಯಾನದ ನೇತೃತ್ವ ವಹಿಸಿದ್ದ ಪ್ರಧಾನ ಮಂತ್ರಿಗಳು ಮಹಾತ್ಮಾ ಗಾಂಧೀಜಿಯವರ ಸ್ವಚ್ಛ ಮತ್ತು ಆರೋಗ್ಯಕರ ಭಾರತದ ಕನಸನ್ನು ಈಡೇರಿಸಬೇಕು ಎಂದು ಜನತೆಗೆ ಕರೆ ನೀಡಿದರು. ಶ್ರೀ ನರೇಂದ್ರಮೋದಿಯವರೇ ಮಂದಿರ ಮಾರ್ಗ, ಪೊಲೀಸ್ ಠಾಣೆಯಲ್ಲಿ ಸ್ವಚ್ಛತಾ ಅಭಿಯಾನವನ್ನು ನಡೆಸಿದ್ದರು. ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ, ದೇಶಾದ್ಯಂತ ಸಾಮೂಹಿಕ ಸ್ವಚ್ಛತಾ ಆಂದೋಲನಕ್ಕೆ ಚಾಲನೆ ನೀಡಿದ ಪ್ರಧಾನ ಮಂತ್ರಿಗಳು ಖುದ್ದು ಪೊರಕೆ ಹಿಡಿದು ಸ್ವಚ್ಛತೆ ಆರಂಭಿಸಿದ್ದರು. "ಗಲೀಜು ಮಾಡಲು ಬಿಡುವುದಿಲ್ಲ" ಎನ್ನುವುದು ಮಂತ್ರವಾಗಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿದ್ದರು. ಸ್ವಚ್ಛತಾ ಆಂದೋಲನದಲ್ಲಿ ಪಾಲ್ಗೊಳ್ಳುವಂತೆ ಶ್ರೀ ನರೇಂದ್ರ ಮೋದಿಯವರು 9 ಗಣ್ಯರಿಗೆ ಆಹ್ವಾನವನ್ನೂ ನೀಡಿದ್ದರು. ಅಲ್ಲದೆ ತಲಾ 9 ಮಂದಿಗೆ ಆಹ್ವಾನ ನೀಡುವಂತೆ ಆ ಗಣ್ಯರನ್ನು ಕೋರಿದ್ದರು. ಪ್ರಧಾನ ಮಂತ್ರಿಗಳು ತಮ್ಮ ಮಾತು, ಸಂದೇಶ ಮತ್ತು ಕೃತಿಯ ಮೂಲಕ ಸ್ವಚ್ಛ ಭಾರತದ ಸಂದೇಶವನ್ನು ಜನರಿಗೆ ತಲುಪಿಸಿದ್ದಾರೆ. ವಾರಣಾಸಿಯಲ್ಲೂ ಅವರು ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಿದ್ದಾರೆ. ಅಷ್ಟೇ ಅಲ್ಲ ದೇಶಾದ್ಯಂತ ಸಂಗೀತ, ನಾಟಕಗಳ ಮೂಲಕವೂ ಸ್ವಚ್ಛತೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಬಾಲಿವುಡ್ ನಟರಿಂದ ಆರಂಭಿಸಿ ಕಿರುತೆರೆ ಕಲಾವಿದರು, ಖ್ಯಾತನಾಮರಾದ ಅಮಿತಾಬ್ ಬಚ್ಚನ್, ಆಮಿರ್ ಖಾನ್, ಕೈಲಾಶ್ ಖೇರ್, ಪ್ರಿಯಾಂಕ ಚೋಪ್ರಾ, ಸಬ್ ಟಿವಿ ಕಾರ್ಯಕ್ರಮ ತಾರಕ್ ಮೆಹ್ತಾ ಕಾ ಉಲ್ಟಾ ಚಸ್ಮಾ ಕಲಾವಿದರು. ಸ್ವಚ್ಛಭಾರತ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ. ಕ್ರೀಡಾಪಟುಗಳಾದ ಸಚಿನ್ ತೆಂಡುಲ್ಕರ್, ಸಾನಿಯಾಮಿರ್ಜಾ, ಸೈನಾನೆಹ್ವಾಲ್, ಮೇರಿಕೋಂ ಮೊದಲಾದವರೂ ಸ್ವಚ್ಛ ಭಾರತ ಆಂದೋಲನದಲ್ಲಿ ಭಾಗಿಯಾಗಿದ್ದಾರೆ..

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ತಮ್ಮ ಮಾಸಿಕ ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಸ್ವಚ್ಛ ಭಾರತ ಆಂದೋಲನಕ್ಕೆ ಸಹಕಾರ ನೀಡಿದ ಎಲ್ಲಾ ಗಣ್ಯರನ್ನೂ ಪದೇ ಪದೇ ನೆನಪಿಸಿಕೊಳ್ಳುತ್ತಿದ್ದಾರೆ. ಸಂಘ ಸಂಸ್ಥೆಗಳ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಮಧ್ಯಪ್ರದೇಶದ ಹರ್ದಾ ಜಿಲ್ಲೆಯ ಸರಕಾರಿ ಅಧಿಕಾರಿಗಳ ತಂಡವನ್ನು ಪ್ರಧಾನ ಮಂತ್ರಿಗಳು ವಿಶೇಷವಾಗಿ ಶ್ಲಾಘಿಸಿದ್ದಾರೆ. ಬೆಂಗಳೂರಿನ ನ್ಯೂ ಹಾರಿಜನ್ ಶಾಲೆಯ 5 ಮಕ್ಕಳಿಗೂ ಪ್ರಧಾನ ಮಂತ್ರಿಗಳ ಶ್ಲಾಘನೆ ಸಂದಿದೆ. ಈ ವಿದ್ಯಾರ್ಥಿಗಳು ತ್ಯಾಜ್ಯವನ್ನು ಮಾರುವುದಕ್ಕೆ ಮತ್ತು ಖರೀದಿಸುವುದಕ್ಕೆ ಮೊಬೈಲ್ ಅಪ್ಲಿಕೇಶನ್ ಒಂದನ್ನು ಅಭಿವೃದ್ಧಿ ಪಡಿಸಿದ್ದಾರೆ.

ಪ್ರಶ್ನೆಗಳು:

1. ಇವರ ಜಯಂತಿಯ ಅಂಗವಾಗಿ ಸ್ವಚ್ಛಭಾರತ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು.

1. ನೆಹರು 2. ಅಂಬೇಡ್ಕರ್ 3. ಗಾಂಧೀಜಿ 4. ಲಾಲ್ ಬಹದ್ದೂರ್ ಶಾಸ್ತ್ರಿ

2. ಸ್ವಚ್ಛಭಾರತ ಅಭಿಯಾನವನ್ನು ಜಾರಿಗೆ ತಂದವರು

1. ಕ್ರೇಜಿವಾಲ್ 2. ನರೇಂದ್ರ ಮೋದಿ 3. ಯಡಿಯೂರಪ್ಪ 4. ಪ್ರಣಬ್ ಮುಖರ್ಜಿ

3. ನರೇಂದ್ರಮೋದಿಯವರು ಕೆಳಗಿನ ಯಾವ ಕಾರ್ಯಕ್ರಮದಲ್ಲಿ ಅಭಿಯಾನದ ಬಗ್ಗೆ ಮಾತನಾಡಿದರು.

1. ಮನ್ ಕೀ ಬಾತ್ 2. ಸ್ವಚ್ಛಭಾರತ್ 3. ದೇಶ್ ಕ ಆಂದೋಲನ್ 4. ಮೇರ ದೇಶ್

4. ಬೆಂಗಳೂರಿನ ಈ ಶಾಲೆಯ 5 ಮಕ್ಕಳಿಗೂ ಪ್ರಧಾನ ಮಂತ್ರಿಗಳ ಶ್ಲಾಘನೆ ಸಂದಿದೆ.

1. ಡೆಲ್ಲಿ ಪಬ್ಲಿಕ್ ಸ್ಕೂಲ್ 2. ಡಿ.ಪಿ.ಎಸ್ 3. ನ್ಯೂ ಹಾರಿಜನ್ 4. ನ್ಯೂ ಜೀ ಸ್ಕೂಲ್

5. ಹರ್ದಾ ಜಿಲ್ಲೆಯು ಈ ರಾಜ್ಯದಲ್ಲಿದೆ.

1 . ರಾಜಸ್ತಾನ 2. ಕರ್ನಾಟಕ 3. ಮಧ್ಯಪ್ರದೇಶ

( ಅನ್ವಯಿಕ ವ್ಯಾಕರಣ – 16 ಅಂಕಗಳು )

II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (16ಕ್ಕೆ ಮಾತ್ರ) (1x16=16)

1. ಮೂದಲಿಸು- ಈ ಪದದ ಸಮಾನಾರ್ಥಕ ಪದ.

1. ಹೀಯಾಳಿಸು 2. ನೆರವಾಗು 3. ರಕ್ಷಣೆಮಾಡು 4. ಅವಮಾನವಲ್ಲದ

2. ಬಂಧನ – ಈ ಪದದ ವಿರುದ್ಧಾರ್ಥ ಪದ..

1. ಬಂಧಿಸು 2: ಬಿಡುಗಡೆ 3. ಕಾಪಾಡು 4. ಅಬಂಧನ

3. ನನ್ನ ಮಗನ ಜೀವ ಅಪಾಯದಲ್ಲಿದೆಯೆಂಬುದು ನಿಮಗೆ ಗೊತ್ತಿಲ್ಲವೇ ?-ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ ಇದು.

1. ಪೂರ್ಣವಿರಾಮ 2. ಭಾವಸೂಚಕ 3. ಪ್ರಶ್ನಾರ್ಥಕ 4. ಉದ್ಧರಣ

4. 'ಭೀಮರಾಯನು ಅವನ ಸೇನಾನಿಗಳನ್ನು ಹುರಿದುಂಬಿಸಿದನು.'- ಈ ವಾಕ್ಯದಲ್ಲಿನ ಸರ್ವನಾಮ ಪದ .

1. ಭೀಮರಾಯನು 2. ಸೇನಾನಿಗಳನ್ನು 3. ಹುರಿದುಂಬಿಸಿದನು 4. ಅವನ

5 ಮಳೆಯು ರಪರಪನೆ ಬಿದ್ದಿತು. ಈ ವಾಕ್ಯದಲ್ಲಿ 'ರಪರಪ' - ಎಂಬುದು .

1. ದ್ವಿರುಕ್ತಿ 2. ಜೋಡಿಪದ 3. ಅನುಕರಣಾವ್ಯಯ 4. ಕ್ರಿಯಾಪದಗಳು

6. ಶಿಲ್ಪಿಗಳು ಸುಂದರವಾದ ಗುಡಿಯನ್ನು ಕಟ್ಟಿದರು. - ಈ ವಾಕ್ಯದಲ್ಲಿರುವ ಕ್ರಿಯಾಪದದ ಧಾತು

1. ಶಿಲ್ಪಿಗಳು 2. ಕಡಿದ 3. ಗುಡಿಯನ್ನು 4. ಕಟ್ಟು

7. ಕಾಡನ್ನು - ಇಲ್ಲಿರುವ ವಿಭಕ್ತಿ ಪ್ರತ್ಯಯ

1. ಪ್ರಥಮಾ 2. ಚತುರ್ಥೀ 3. ದ್ವಿತೀಯಾ 4. ಪಂಚಮೀ

8. ಬೆಳೆಯುವ ಸಿರಿ __________ ಈ ಗಾದೆಯ ಮುಂದಿನ ಭಾಗ.

1. ಮಡಿಕೆಯಲ್ಲಿ 2. ಮನದಲ್ಲಿ 3. ಸಿರಿಯಲ್ಲಿ 4. ಮೊಳಕೆಯಲ್ಲಿ

9. ಮಿತ್ರ - ಈ ಪದದ ಬಹುವಚನ ರೂಪ.

1. ಮಿತ್ರಗಳು 2. ಮಿತ್ರರು 3. ಅಮಿತ್ರ 4. ಮಿತ್ರಗರು

10. ನಾನು ದೇವಾಲಯದ ಬಳಿ ಕುರುಡನನ್ನು ನೋಡಿದೆ -ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ.

1. ರೂಢನಾಮ 2. ಅಂಕಿತನಾಮ 3. ಅನ್ವರ್ಥನಾಮ 4. ಸರ್ವನಾಮ

11. ಹಾವನ್ನು ನೋಡಿ ರಮೇಶನು ಓಡಿ ಓಡಿ ಮನೆಗೆ ಬಂದನು. ಗೆರೆ ಎಳೆದ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

1. ದ್ವಿರುಕ್ತಿ 2. ಅನುಕರಣಾವ್ಯಯ 3 .ಧಾತು 4. ಜೋಡಿನುಡಿ

12. ರಥೋತ್ಸವ - ಈ ಪದವು ಕೆಳಗಿನ ಈ ಸಂಧಿಗೆ ಉದಾಹರಣೆಯಾಗಿದೆ.

1. ಗುಣಸಂಧಿ 2. ಸವರ್ಣದೀರ್ಘಸಂಧಿ 3 .ವೃದ್ಧಿಸಂಧಿ 4. ಆದೇಶಸಂಧಿ

13. ಕೋತಿಯು ಬಾಳೆಹಣ್ಣನ್ನು ತಿಂದಿತು – ಈ ವಾಕ್ಯದಲ್ಲಿ ಬಳಸಲಾಗಿರುವ ಕಾಲ ಪ್ರಯೋಗ:

1. ಭೂತಕಾಲ 2. ವರ್ತಮಾನಕಾಲ 3 .ಭವಿಷ್ಯತ್ ಕಾಲ 4. ಬೇಸಿಗೆಕಾಲ

14. ಸನ್ಯಾಸಿ – ಈ ಪದದ ಅನ್ಯಲಿಂಗ ರೂಪ

1. ಸನ್ಯಾಸಿಗಳು 2. ಸನ್ಯಾಸಿನಿ 3 .ಸನ್ಯಾಸಿಯರು 4. ಸನ್ಯಾಸಿಯು

15. ಕುಣಿದ್ಹಾಂಗ – ಈ ಪದದ ಗ್ರಾಂಥಿಕ ರೂಪ.

1. ಕುಣಿಯುವುದು 2. ಕುಣಿಯುತ್ತಿರು 3 .ಕುಣಿದ ಹಾಗೆ 4. ಕುಣಿಯದ

16 . 'ದವಸ' - ಪದದ ಜೋಡಿಪದ

1. ಕಡ್ಡಿ 2. ಧಾನ್ಯ 3.ಪೊರಕೆ 4. ಮುಸುರೆ

17. 'ಲೋಪಸಂಧಿ' ಗೆ ಉದಾಹರಣೆಯಾದ ಪದ.

1. ಒಂದೊಂದು 2. ಇರುಳುಗಣ್ಣು 3 .ಬುರುಡೆಯಾಕಾರ 4. ಮೈಯೆಲ್ಲಾ

18. ಶುಭಗಳಿಗೆ – ಈ ಪದದ ಪ್ರಾಸಪದ

1. ರೂಪತಾಳಿ 2. ಮಳಿಗೆ 3 .ಕೇರಿಗೆ 4. ದನಿದನಿಗೆ

19. ಆಕ್ಸಿಡೆಂಟ್ – ಈ ಪದದ ಅನ್ಯದೇಶೀಯ ಸಮಾನಾಂತರ ಕನ್ನಡ ಪದ

1. ಆಪರೇಷನ್ 2. ದಾದಿ 3 .ಥಿಯೇಟರ್ 4. ಅಪಘಾತ

III.(ಅ) ಈ ಕೆಳಗೆ ಕೊಟ್ಟಿರುವ ಪಠಿತ ಗದ್ಯಭಾಗ " ಮಿತ್ರರ ಸಮಾಗಮ" ಪಾಠವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: **(1x5=5)**

ಅಕ್ಬರ್ , ಬೀರಬಲ್ ದೊರೆ ಮಂತ್ರಿಯಾಗಿದ್ದಂತೆ ಆತ್ಮೀಯ ಮಿತ್ರರೂ ಆಗಿದ್ದರು . ಒಮ್ಮೆ ಅಕ್ಬರ್ ಮಹಾಶಯನಿಗೆ ಬೀರಬಲ್ಲನ ಮೇಲೆ ಯಾವುದೋ ಕಾರಣಕ್ಕೆ ಅಸಮಾಧಾನ ಉಂಟಾಯಿತು. " ನಿನ್ನ ಮುಖವನ್ನು ತೋರಿಸಬೇಡ , ಎಲ್ಲಿಗಾದರೂ ಹೊರಟು ಹೋಗು" ಎಂದು ಬೀರಬಲ್‌ಗೆ ಆದೇಶಿಸಿದ. ಅಂದಿನಿಂದ ಬೀರಬಲ್ ಯಾರಿಗೂ ಕಾಣದಂತೆ ಮರೆಯಾದ.

ಕೆಲ ದಿನಗಳ ನಂತರ ಅಕ್ಬರನಿಗೆ ಬೀರಬಲ್ಲನನ್ನು ಕಾಣುವ ತವಕ ಉಂಟಾಯಿತು. ಅವನಿಗಾಗಿ ಹುಡುಕಾಡಿಸಿದ. ಬೀರಬಲ್ ಎಲ್ಲಿಯೂ ಸಿಗಲಿಲ್ಲ . " ಎಂಥ ಕೆಲಸ ಆಗಿ ಹೋಯಿತು ." ಎಂದು ಅಕ್ಬರ್ ಚಿಂತಿಸತೊಡಗಿದ. ಒಮ್ಮೆ ಅಕ್ಬರ್ ದರ್ಬಾರ್ ನಡೆಸುತ್ತಿರುವಾಗ ಸೇವಕನೊಬ್ಬ ಒಳಬಂದು " ಪ್ರಭು ! ಅರಮನೆಯ ದ್ವಾರದಲ್ಲಿ ಒಬ್ಬ ಸಾಧು ಬಂದಿದ್ದಾರೆ. ಅವರ ಶಿಷ್ಯರು ಆ ಸಾಧು ವಿಶ್ವದಲ್ಲಿಯೇ ದೊಡ್ಡ ಮೇಧಾವಿ ಹಾಗೂ ತುಂಬಾ ಬುದ್ಧಿವಂತರೆಂದು ಹೇಳುತ್ತಿದ್ದಾರೆ " ಎಂದು ಹೇಳಿದ. ಅಕ್ಬರ್ ತಕ್ಷಣವೇ ಆ ಸಾಧುವನ್ನು ಬರಮಾಡಿಕೊಂಡನು. ಅರಮನೆಯನ್ನು ಪ್ರವೇಶಿಸಿದ ಸಾಧು ತುಂಬಾ ತೇಜಸ್ವಿಯಾಗಿದ್ದ. ಅದೇ ಅವನೊಬ್ಬ ಬುದ್ಧಿವಂತನೆಂಬುದನ್ನು ಸಾರುತ್ತಿತ್ತು.

" ಸಾಧು ! ನೀನು ಬಹಳ ಬುದ್ಧಿವಂತನೆಂದು ಕೇಳಿದೆ. ನಿನ್ನನ್ನು ಪರೀಕ್ಷಿಸುವ ಸಲುವಾಗಿ ಆಸ್ಥಾನದ ಪಂಡಿತರು ನಿನಗೆ ಪ್ರಶ್ನೆಗಳನ್ನು ಕೇಳಲು ಹೇಳುತ್ತೇನೆ. ಸರಿಯಾಗಿ ಉತ್ತರಿಸಿದರೆ ಅಮೂಲ್ಯವಾದ ಉಡುಗೊರೆಗಳನ್ನು ನೀಡುತ್ತೇನೆ " ಎಂದನು. ಅಕ್ಬರ್ ಆ ಮಾತಿಗೆ ಸಾಧು ಆಗಬಹುದು ಎಂದನು. ಅಕ್ಬರನ ಆಸ್ಥಾನದಲ್ಲಿ ತಾನ್‌ಸೇನ್, ತೋದರಮಲ್ಲ , ಅಬುಲ್ ಫಜಲ್, ಫೈಜಿ ಮೊದಲಾದ ವಿದ್ವಾಂಸರಿದ್ದರು. ಅವರು ಪ್ರಶ್ನಿಸತೊಡಗಿದರು. ಮೊದಲಿಗೆ .....

ಅಬುಲ್ ಫಜಲ್ : ಕಳೆದು ಹೋದದ್ದನ್ನು ಮತ್ತೆ ಪಡೆಯಲಾಗದ್ದು ಯಾವುದು ?

ಸಾಧು : ಜೀವ, ಅವಕಾಶ, ಸಮಯ.

ತೋದರ ಮಲ್ಲ : ಜಗತ್ತಿನಲ್ಲಿ ಅತ್ಯುತ್ತಮನಾದ ಸ್ನೇಹಿತನಾರು?

ಸಾಧು : ಯುಕ್ತಾಯುಕ್ತ ಪರಿಜ್ಞಾನ ,ವ್ಯಕ್ತಿಯ ಮುಂದಾಲೋಚನೆ.

ಫೈಜಿ : ವಿಶ್ವದಲ್ಲಿ ಅತ್ಯುತ್ತಮವಾದ ವಸ್ತು ಯಾವುದು?

ಸಾಧು : ಜ್ಞಾನ

( ವಿದ್ವಾಂಸರು ಕೇಳಿದ ಪ್ರಶ್ನೆಗಳಿಗೆ ಸಾಧು ಸಾರಾಗವಾಗಿ ಉತ್ತರಿಸುತ್ತಿದ್ದ )

ಮಾನ್ ಸಿಂಗ್ : ಒಬ್ಬ ವ್ಯಕ್ತಿಯ ಅತ್ಯುತ್ತಮವಾದ ಸಾಮರ್ಥ್ಯ ಯಾವುದು? ಮಾರುತಕ್ಕಿಂತ ವೇಗವಾದುದು ಯಾವುದು? ಅತ್ಯಂತ ಸಿಹಿಯಾದದು ಯಾವುದು? ಎಂದು ಪ್ರಶ್ನೆಗಳ ಸುರಿ ಮಳೆಗರೆದ

ಸಾಧು : ವ್ಯಕ್ತಿಯ ಅತ್ಯುತ್ತಮ ಸಾಮರ್ಥ್ಯ ಆತನ ಧೈರ್ಯ ; ಮಾರುತಕ್ಕಿಂತ ವೇಗವಾದುದು ಮನುಷ್ಯನ ಕಲ್ಪನೆ ; ಅತ್ಯಂತ ಸಿಹಿಯಾದದು ಮಗುವಿನ ನಗು.

ತಾನ್ ಸೇನ್ : ಸಂಗೀತದಲ್ಲಿ ಅವಿನಾಶಿ ಯಾವುದು?

ಸಾಧು : ಸ್ವರಗಳು .

ವಿದ್ವಾಂಸರೆಲ್ಲರು ಸಾಧುವಿನ ಬುದ್ಧಿವಂತಿಕೆಯನ್ನು ಮೆಚ್ಚಿಕೊಂಡರು .

ಪ್ರಶ್ನೆಗಳು

**1.** ಅಕ್ಬರನಿಗೆ ಯಾರ ಮೇಲೆ ಅಸಮಾಧಾನ ಉಂಟಾಯಿತು ...

1. ಮಾನ್ ಸಿಂಗ್ 2. ತೋದರಮಲ್ಲ 3. ತಾನ್ ಸೇನ್ 4. ಬೀರಬಲ್

**2.** ಬೀರಬಲ್ಲನು ಅಕ್ಬರನ ಆಸ್ಥಾನಕ್ಕೆ ಈ ವೇಷದಲ್ಲಿ ಬಂದಿದ್ದನು.

1. ಮಂತ್ರಿ 2. ಸಾಧು 3. ವಿದ್ವಾಂಸ 4. ವ್ಯಾಪಾರಿ

**3.** ಮಾರುತಕ್ಕಿಂತ ವೇಗವಾದುದು

1. ಜ್ಞಾನ 2. ಧೈರ್ಯ 3. ಕಲ್ಪನೆ 4. ಸ್ವಾರ್ಥ

**4.** ಕಳೆದು ಹೋದದ್ದನ್ನು ಮತ್ತೆ ಪಡೆಯಲಾಗದು ಯಾವುದು ?- ಈ ಸಾಲನ್ನು ಪ್ರಶ್ನಿಸಿದವರು

1. ಮಾನ್ ಸಿಂಗ್ 2. ತೋದರಮಲ್ಲ 3. ತಾನ್ ಸೇನ್ 4. ಅಬುಲ್ ಫಜಲ್

**5.** ವಿಶ್ವದಲ್ಲಿ ಅತ್ಯುತ್ತಮವಾದ ವಸ್ತು ಇದು.

1. ಜ್ಞಾನ 2. ಮಾರುತ 3. ಸಂಗೀತ 4. ಸಮಯ

(ಆ) ಈ ಕೆಳಗೆ ಕೊಟ್ಟಿರುವ ಪಠಿತ ಪದ್ಯಭಾಗ " ಸರ್ವಜ್ಞನ ವಚನಗಳು " ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: **(1x5=5)**

ಹರ ತನ್ನೊಳಿರ್ದು, ಗುರು ತೋರದೇ ತಿಳಿವಿದೆ ?
ಮರದೊಳಗೆ ಅಗ್ನಿ ಇರುತಿರ್ದು । ತನ್ನ
ತಾನರಿಯಬೇಕೆಂದ ಸರ್ವಜ್ಞ ॥
ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲರಿಯರು । ಗುರುವಿಂದ
ಬಂಧುಗಳು ಉಂಟೆ ಸರ್ವಜ್ಞ ॥
ಗುರುವಿಂದ ಬಂಧುಗಳು, ಗುರುವಿಂದ ದೈವಗಳು
ಗುರುವಿಂದಲಿಹುದು ಪುಣ್ಯವದು । ಜಗಕೆಲ್ಲ
ಗುರುವಿಂದ ಮುಕ್ತಿ ಸರ್ವಜ್ಞ ॥
ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎರಗಿದರೆ
ನರಸುರರು ಬಂದು ಸಿರಿಸುರಿದು । ಕೈಲಾಸ
ಕರತಲಾಮಲಕ ಸರ್ವಜ್ಞ ॥

ಪ್ರಶ್ನೆಗಳು

1. ಮೂರು ಸಾಲಿನ ಪದ್ಯವನ್ನು ಹೀಗೆನ್ನುವರು:

1. ತ್ರಿಪದಿ 2. ಚೌಪದಿ 3. ಕಂದ 4. ಷಟ್ಪದಿ

2. ಗುರುಹಿರಿಯರಿಗೆ ಹೀಗೆ ನಮಿಸಬೇಕು:

1. ತಲೆಯೆತ್ತಿ 2. ಶಿರಬಾಗಿ 3.ವಂದಿಸುತ್ತಾ 4. ಧ್ಯಾನಿಸುತ್ತಾ

3. ಮರದೊಳಗೆ ಇರುವುದು ಇದು.

1. ಕಬ್ಬಿಣ 2. ತಾಮ್ರ 3. ಕಲ್ಲು 4. ಅಗ್ನಿ

4. ಇವರಿಂದ ಜಗಕೆ ಮುಕ್ತಿ ದೊರೆಯುವುದು.

1. ಹಿರಿಯರಿಂದ 2. ಗುರುವಿನಿಂದ 3. ಕಿರಿಯರಿಂದ 4. ಸ್ನೇಹಿತರಿಂದ

5 . ನರಸುರರು ಬಂದು ಸುರಿಯುವರು ಇದನ್ನು:

1. ಸಿರಿ 2. ಕರಿ 3. ಸಿಹಿ 4. ಕಹಿ

IV ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: (1x4=4)

1. ಅಥರ್ಗಾ ಗ್ರಾಮ ಈ ಜಿಲ್ಲೆಯಲ್ಲಿದೆ :

1. ಗದಗ 2. ಕೊಪ್ಪಳ 3. ಬಿಜಾಪುರ 4. ಬೆಂಗಳೂರು

2. ಶಿಕ್ಷಕನಿಗೊಂದು ಗುಡಿ ಈ ಪೂರಕಪಾಠವನ್ನು ಬರೆದ ಕವಿಯ ಹೆಸರು

1. ಗಿರೀಶ್ ತಾಳಿಕಟ್ಟೆ 2. ಭಾಸ್ಕರ ನೆಲ್ಯಾಡಿ 3. ನಿಂಗು ಸೊಲಗಿ 4. ಚಿದ್ರೆ ಶಂಕರಯ್ಯ ಸ್ವಾಮಿ

3. ಅಥರ್ಗಾ ಗ್ರಾಮ ಸುಧಾರಣೆ ಮಾಡಿದ ಮಾಸ್ತರರು ಇವರು

1. ರೇವಣಸಿದ್ದಪ್ಪ 2. ಸಿದ್ದಪ್ಪ 3. ಶ್ರೀಧರಸಿದ್ದಪ್ಪ 4. ದುಂಡಿರಾಜ್

4. ಮಾಸ್ತರಿಗಾಗಿ ಪ್ರತಿವರ್ಷ ಈ ದಿನದಂದು ಭಾರಿ ಜಾತ್ರೆ ನಡೆಯುತ್ತಿತ್ತು.

1. ದೀಪಾವಳಿಹಬ್ಬ 2. ಶಿವರಾತ್ರಿ ಹಬ್ಬ 3. ಗಣೇಶಹಬ್ಬ 4. ಸಂಕ್ರಾತಿ ಹಬ್ಬ

## ಭಾಗ – B ( 40 ಅಂಕಗಳು)

## ( ಬರವಣಿಗೆಕೌಶಲ್ಯ-12 ಅಂಕಗಳು )

V. ನಿಮ್ಮ ಶಾಲೆಯ ವತಿಯಿಂದ ಕೈಗೊಳ್ಳುವ ಪ್ರವಾಸಕ್ಕಾಗಿ ಹಣ ಕಳುಹಿಸಿಕೊಡುವಂತೆ ಕೋರಿ ನಿಮ್ಮ ತಂದೆಗೆ ಪತ್ರ ಬರೆಯಿರಿ. **(4)**

VI. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ . (4)

1. ಪರಿಸರ ಸಂರಕ್ಷಣೆಯಲ್ಲಿ ನನ್ನ ಪಾತ್ರ 2. ಗಣಕಯಂತ್ರದ ಉಪಯೋಗ 3. ನನ್ನ ನೆಚ್ಚಿನ ಕ್ರೀಡಾಪಟು

VII. ಸುಳಿವು ಪದಗಳ ಸಹಾಯದಿಂದ ಕಥೆಯನ್ನು ಪೂರ್ಣಗೊಳಿಸಿ: (1/2 X 8=4)

( ಜನ , ಭರವಸೆ , ಹರಕುಬಟ್ಟೆ , ಆಹಾರವನ್ನು, ಅತಿಥಿಗಳಿಗೆ , ಅಕ್ಕಿಯನ್ನು , ದೇವರಿಗೆ , ದೈವಭಕ್ತ , ದ್ವಾರಕೆಯ , ಸುದಾಮ )

ಭಗವಾನ್ ಕೃಷ್ಣ ವಿದ್ಯಾರ್ಥಿಯಾಗಿದ್ದಾಗ ಅವನಿಗೆ ಒಬ್ಬ ಸಹಪಾಠಿ ಇದ್ದ . ಅವನು ಬಲು ಬಡವ . ಅವನ ಹೆಸರು ___________. ಕೃಷ್ಣ ಮುಂದೆ ___________ ದೊರೆಯಾದ. ಸುದಾಮ ಬಡವನಾಗಿಯೆ ಉಳಿದ . ಅವನಿಗೆ ಅನೇಕ ಮಕ್ಕಳು. ಆದರೆ ಅವನು _________ ಆಗಿದ್ದ . ಪ್ರತಿದಿನ ಸುದಾಮ ಭಜನೆಗಳನ್ನು ಹಾಡುತ್ತಾ ಬೀದಿಗಳಲ್ಲಿ ಹೋಗುತ್ತಿದ್ದ . ಜನ ಹಿಡಿ ಅಕ್ಕಿಯನ್ನು ಕೊಡುತ್ತಿದ್ದರು. ಮನೆಗೆ ಬಂದು ___________ ಹೆಂಡತಿಗೆ ಕೊಡುತ್ತಿದ್ದ. ಅವಳು ಅದನ್ನು ಅಡಿಗೆ ಮಾಡುತ್ತಿದ್ದಳು. ಸುದಾಮ ಅನ್ನವನ್ನು ಮೊದಲು __________ ಅರ್ಪಿಸುತ್ತಿದ್ದ. ಆನಂತರ ಸ್ವಲ್ಪ ಭಾಗವನ್ನು __________ ನೀಡುತ್ತಿದ್ದ. ಅನಂತರ ತನ್ನ ಮಕ್ಕಳಿಗೆ ಊಟ ಹಾಕುತ್ತಿದ್ದ. ಗಂಡ ಹೆಂಡತಿ ಉಳಿದುದನ್ನು ತಿನ್ನುತ್ತಿದ್ದರು. ಸುದಾಮ ಮಾರನೆಯ ದಿನಕ್ಕೆ ಎಂದೂ ___________ ಕೂಡಿಡುತ್ತಿರಲಿಲ್ಲ. ಯಾವಾಗಲೂ ದೇವರು ಅನ್ನವನ್ನು ಕೊಡುತ್ತಾನೆ ಎಂದು ಅವನಿಗೆ ಭರವಸೆ. ಮಕ್ಕಳು ಬೆಳೆದರು. ಸುದಾಮ ತರುತ್ತಿದ್ದ ಭಿಕ್ಷೆ ಸಾಕಾಗುತ್ತಿರಲಿಲ್ಲ. ಎಷ್ಟೋ ದಿನ ಅವರು ಊಟವಿಲ್ಲದೆ ಇರಬೇಕಾಗುತ್ತಿತ್ತು. ಸುದಾಮನಿಗೆ ಉಡಲು ಒಳ್ಳೆಯ ಬಟ್ಟೆ ಇರಲಿಲ್ಲ. ಹರಕು ಬಟ್ಟೆ ಉಡುತ್ತಿದ್ದ . ಆದ್ದರಿಂದ ______ ಅವನನ್ನು 'ಕುಚೇಲ' ಎಂದು ಕರೆಯುತ್ತಿದ್ದರು. ಕುಚೇಲ ಎಂದರೆ 'ಹರಕು ಬಟ್ಟೆಯವನು' ಎಂದು ಅರ್ಥ .

( ಪಠ್ಯಗಳ ಅಧ್ಯಯನ – 28 ಅಂಕಗಳು )

VIII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ . (1x4=4)

1. ಅತ್ತಿಮಬ್ಬೆಯ ತಂದೆ , ತಾಯಿಯ ಹೆಸರೇನು ?

2. ಭೀಮರಾಯನು ಎಂತಹ ಯುದ್ಧದಲ್ಲಿ ಪರಿಣಿತನಾಗಿದ್ದನು ?

3. ನಾವು ಯಾರಿಗಾಗಿ ನೆಲ ಜಲಗಳನ್ನು ರಕ್ಷಿಸಬೇಕು ?

4. ಶ್ರಾವಣದ ಮಳೆಯನ್ನು ಬೇಂದ್ರೆಯವರು ಯಾರ ಕುಣಿತಕ್ಕೆ ಹೋಲಿಸಿದ್ದಾರೆ ?

IX. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ . (2x4=8)

1. ಜಾತ್ರೆಯಲ್ಲಿ ಯಾವ ಯಾವ ಅಂಗಡಿಗಳು ಇದ್ದವು ?

2. ಭೀಮರಾಯನು ತನ್ನ ಸೇನಾನಿಗಳಿಗೆ ಮೆಚ್ಚಿಗೆಯಿಂದ ಹೇಳಿದ ಮಾತುಗಳಾವುವು ?

3. ಗಾಳಿ , ನೀರು ಮಲಿನವಾಗದಿರಲು ಏನು ಮಾಡಬೇಕು ?

4. ನುಗ್ಗೆ ಸೊಪ್ಪಿನ ಪ್ರಯೋಜನಗಳೇನು ?

X . ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ . (3x2=6)

1. ಬಾಲಕಿ ಅತ್ತಿಮಬ್ಬೆಯಲ್ಲಿದ್ದ ಗುಣಗಳಾವುವು ? ಅತ್ತಿಮಬ್ಬೆ ವಿದ್ಯಾಪೋಷಿತೆಯಾಗಿ ಮಾಡಿದ ಕಾರ್ಯಗಳಾವುವು ?
2. ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಯಾವುದರ ಮೇಳ ಏರ್ಪಟ್ಟಿತ್ತು ? ಅಂದು ಹೀರೇಕಾಯಿ ತನ್ನನ್ನು ಹೇಗೆ ಪರಿಚಯಿಸಿಕೊಂಡಿತು ?

XI . ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಡನೆ ವಿವರಿಸಿ . (3x2=6)

1. ಇಲ್ಲಿಗೆ ಬರುವುದಕ್ಕೆ ನಿಮಗೆ ಇಷ್ಟೊತ್ತು ಬೇಕಾಯಿತೇ ?
2. ದಾಸ್ಯದ ಅರಮನೆಗಿಂತ ಸ್ವಾತಂತ್ರ್ಯದ ಸೆರೆಮನೆಯೇ ಲೇಸು ?

XII . ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ .( ಒಂದಕ್ಕೆ) (4x1=4)

1. ಬೇಂದ್ರೆಯವರು ಶ್ರಾವಣದ ಪ್ರಾಕೃತಿಕ ಸೌಂದರ್ಯವನ್ನು ಯಾವ ರೀತಿ ವರ್ಣಿಸಿದ್ದಾರೆ ?

( ಅಥವಾ )

ವೈದ್ಯ ಹಾಗೂ ರೋಗಿಯ ತಂದೆಯ ನಡುವೆ ಯಾವ ಮಾತುಕತೆಗಳು ನಡೆದವು ?

*******

SINDHI HIGH SCHOOL, BENGALURU

ANNUAL EXAMINATION ( 2022 – 2023 )

SUBJECT – L 2 KANNADA

Date : 27 – 03 - 2023 Max Marks : 80

Class : VII

**ANSWER KEY**

I (ಅ) ಗದ್ಯಭಾಗದ ಉತ್ತರಗಳು . (1x5=5)

1) 2. ಚಿದಂಬರ ರಹಸ್ಯ 2) 1. ತೀರ್ಥಹಳ್ಳಿಯ ಕುಪ್ಪಳ್ಳಿ 3) 4. ಲಿಂಗ ಬಂದ

4) 3. ಕುವೆಂಪು. 5) 1. ಅಧ್ಯಾಪಕ

(ಆ) ಗದ್ಯಭಾಗದ ಉತ್ತರಗಳು . (1x5=5)

1) 3. ಗಾಂಧೀಜಿ 2) 2. ನರೇಂದ್ರ ಮೋದಿ 3) 1. ಮನ್ ಕೀ ಬಾತ್ 4) 4. ನ್ಯೂ ಜೀ ಸ್ಕೂಲ್

5) 3. ಮಧ್ಯಪ್ರದೇಶ

II. ವ್ಯಾಕರಣಾಂಶದ ಉತ್ತರಗಳು ಉತ್ತರ (16ಕ್ಕೆ ಮಾತ್ರ) (1x16=16)

1) 1. ಹೀಯಾಳಿಸು 2) 2. ಬಿಡುಗಡೆ 3) 3.ಪ್ರಶ್ನಾರ್ಥಕ 4) 4.ನಾವು 5) 3.ಅನುಕರಣಾವ್ಯಯ

6) 4.ಕಟ್ಟು 7) 3. ದ್ವಿತೀಯಾ 8) 4. ಮೊಳಕೆಯಲ್ಲಿ 9) ~~3. ಅನ್ವರ್ಥನಾಮ~~ 2. ಉತ್ತರು 10) 3. ಅನ್ವರ್ಥನಾಮ

11) 1. ದ್ವಿರುಕ್ತಿ 12) 1. ಗುಣಸಂಧಿ 13) 1. ಭೂತಕಾಲ 14) 2. ಸನ್ಯಾಸಿನಿ 15) 3 .ಕುಣಿದ ಹಾಗೆ

16) 2. ಧಾನ್ಯ 17) 1. ~~ಒಂದು + ಒಂದು~~ ಒಂದ್ಒಂದು 18) 2. ಮಳಿಗೆ 19) 4. ಅಪಘಾತ

III.(ಅ) ಗದ್ಯಭಾಗದ ಉತ್ತರಗಳು (1x5=5)

1) 4. ಬೀರಬಲ್ 2) 2. ಸಾಧು 3) 3. ಕಲ್ಪನೆ 4) 4. ಅಬುಲ್ ಫಜಲ್

5) 1. ಅಕ್ಬರ್

.(ಆ) ಪದ್ಯಭಾಗದ ಉತ್ತರಗಳು (1x5=5)

1) 1. ತ್ರಿಪದಿ 2) 2. ಶಿರಬಾಗಿ 3) 4. ಅಗ್ನಿ 4) 2. ಗುರುವಿನಿಂದ 5) 1. ಸಿರಿ



P.T.O

IV ಪೂರಕ ಪಾಠದ ಉತ್ತರಗಳು (1x4=4)

1) 3. ಬಿಜಾಪುರ 2) 4. ಚಿದ್ರೆ ಶಂಕರಯ್ಯ ಸ್ವಾಮಿ 3) 1. ರೇವಣಸಿದ್ದಪ್ಪ

4) 2. ಶಿವರಾತ್ರಿ ಹಬ್ಬ

## PART – B- ಅಂಕಗಳು : 40

## ಬರವಣಿಗೆ ಕೌಶಲ್ಯ

**V ನಿಮ್ಮ ಶಾಲೆಯ ವತಿಯಿಂದ ಕೈಗೊಳ್ಳುವ ಪ್ರವಾಸಕ್ಕಾಗಿ ಹಣ ಕಳುಹಿಸಿಕೊಡುವಂತೆ ಕೋರಿ ನಿಮ್ಮ ತಂದೆಗೆ ಪತ್ರ ಬರೆಯಿರಿ.** **(4x1=4)**

ಶ್ರೀ , ಕ್ಷೇಮ , ಸ್ಥಳ – ದಿನಾಂಕ :1/2

ಸಂಭೋದನೆ , ಕ್ಷೇಮ ಸಮಾಚಾರ : 1

ಪತ್ರದ ಒಡಲು : 1.1/2

ಮುಕ್ತಾಯ , ಸಹಿ , ಹೊರವಿಳಾಸ : 1

**VI ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ .** **(4x1=4)**

**ಪೀಠಿಕೆ – 1 ವಿವರಣೆ – 2 ಉಪಸಂಹಾರ – 1**

**VII ಸುಳಿವು ಪದಗಳ ಸಹಾಯದಿಂದ ಕಥೆಯನ್ನು ಪೂರ್ಣಗೊಳಿಸಿ.** **(1/2x8=4)**

**1) ಸುದಾಮ 2) ದ್ವಾರಕೆಯ 3) ದೈವಭಕ್ತ 4) ಅಕ್ಕಿಯನ್ನು 5) ದೇವರಿಗೆ**

**6) ಅತಿಥಿಗಳಿಗೆ 7) ಆಹಾರವನ್ನು 8) ಕುಚೇಲ**

( ಪದ್ಯಗಳ ಅಧ್ಯಯನ – 28 ಅಂಕಗಳು )

VIII. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ . (1x4=4)

1. ಅತ್ತಿಮಬ್ಬೆಯ ತಂದೆ , ತಾಯಿಯ ಹೆಸರೇನು ?

ಉತ್ತರ : ಅತ್ತಿಮಬ್ಬೆಯ ತಂದೆ ಮಲ್ಲಪ್ಪ , ತಾಯಿ ಅಬ್ಬಕಬ್ಬೆ

2. ಭೀಮರಾಯನು ಎಂತಹ ಯುದ್ಧದಲ್ಲಿ ಪರಿಣಿತನಾಗಿದ್ದನು ?

ಉತ್ತರ : ಭೀಮರಾಯನು ಗೆರಿಲ್ಲಾ ಯುದ್ಧದಲ್ಲಿ ಪರಿಣಿತನಾಗಿದ್ದನು.

3. ನಾವು ಯಾರಿಗಾಗಿ ನೆಲ ಜಲಗಳನ್ನು ರಕ್ಷಿಸಬೇಕು ?

ಉತ್ತರ : ನಾವು ನಮ್ಮ ಮುಂದಿನ ಪೀಳಿಗೆಗಾಗಿ ನೆಲ , ಜಲಗಳನ್ನು ರಕ್ಷಿಸಬೇಕು

4. ಶ್ರಾವಣದ ಮಳೆಯನ್ನು ಬೇಂದ್ರೆಯವರು ಯಾರ ಕುಣಿತಕ್ಕೆ ಹೋಲಿಸಿದ್ದಾರೆ ?

ಉತ್ತರ : ಶ್ರಾವಣದ ಮಳೆಯನ್ನು ಬೇಂದ್ರೆಯವರು ರಾವಣನ ಕುಣಿತಕ್ಕೆ ಹೋಲಿಸಿದ್ದಾರೆ.

IX ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ . (2x4=8)

1. ಜಾತ್ರೆಯಲ್ಲಿ ಯಾವ ಯಾವ ಅಂಗಡಿಗಳು ಇದ್ದವು ?

ಉತ್ತರ: ಜಾತ್ರೆಯಲ್ಲಿ ಆಟಿಕೆ ಸಾಮಾನುಗಳ , ಬಲೂನುಗಳ ,ಗೊಂಬೆಗಳ ,ಬಳೆಸರಗಳ, ಬೆಂಡು ಬತ್ತಾಸು, ಸಿಹಿ ತಿಂಡಿಗಳ ಅಂಗಡಿಗಳು ಇದ್ದವು ಮತ್ತು ಬಟ್ಟೆ ,ಪಾತ್ರೆ ,ಹೂವು ಹಣ್ಣುಗಳ ಅಂಗಡಿಗಳು ಇದ್ದವು .

2. ಭೀಮರಾಯನು ತನ್ನ ಸೇನಾನಿಗಳಿಗೆ ಮೆಚ್ಚಿಗೆಯಿಂದ ಹೇಳಿದ ಮಾತುಗಳಾವುವು ?

ಉತ್ತರ : ಭೀಮರಾಯನು ಸೇನಾನಿಗಳಿಗೆ " ಸೇನಾನಿಗಳೇ ನಿಮ್ಮ ಸಾಹಸ ಮೆಚ್ಚುವಂಥದ್ದು. .ಬ್ರಿಟಿಷರನ್ನು ಬಗ್ಗು ಬಡಿದು ಕೊಪ್ಪಳ ಕೋಟೆ ವಶಪಡಿಸಿಕೊಂಡು ಗೆಲುವಿನ ಬಾವುಟ ಹಾರಿಸಿದ್ದೀರಿ ಆದರೆ ಇದಿನ್ನು ಹೋರಾಟದ ಪ್ರಾರಂಭ. ಬ್ರಿಟಿಷರು ನಮ್ಮ ನಾಡು ಬಿಟ್ಟು ತಲಗೂವವರಿಗೂ ಹೋರಾಡೋಣ , ಕೆಚ್ಚೆದೆಯಿಂದ ಹೋರಾಡಲು ಸಜ್ಜಾಗಿರಿ .ಹೀಗೆ ಭೀಮರಾಯನು ತನ್ನ ಸೇನಾನಿಗಳಿಗೆ ಮೆಚ್ಚುಗೆಯ ಮಾತುಗಳನ್ನು ಹೇಳಿದನು.



P.T.O

3. ಗಾಳಿ , ನೀರು ಮಲಿನವಾಗದಿರಲು ಏನು ಮಾಡಬೇಕು ?

ಉತ್ತರ : ಕಾರ್ಖಾನೆಗಳ ಕೊಳಕನ್ನು, ರಾಸಾಯನಿಕಗಳನ್ನು, ಎಲ್ಲೆಡೆಯ ಕಸ ಕೊಳಕನ್ನು ಹರಿಯಲು ಬಿಡಬಾರದು ಹಾಗೆಯೇ ವಾಹನಗಳ ಹಾಗೂ ಕಾರ್ಖಾನೆಗಳ ಬಗೆ ಬಗೆಯ ಹೊಗೆಯನ್ನು ಗಾಳಿಗೆ ಬಿಡದಂತೆ ತಡೆಯುವುದರಿಂದ ಮಲಿನತೆಯನ್ನು ತಡೆಗಟ್ಟಬಹುದು .

4. ನುಗ್ಗೆ ಸೊಪ್ಪಿನ ಪ್ರಯೋಜನಗಳೇನು ?

ಉತ್ತರ : ನುಗ್ಗೆ ಸೊಪ್ಪನ್ನು ಪಲ್ಯ , ಸಾಂಬಾರು ಮುಂತಾದ ಅಡುಗೆಗಳಲ್ಲಿ ಬಳಸುತ್ತಾರೆ .ಇದರಲ್ಲಿ ಕಬ್ಬಿಣ , ಕ್ಯಾಲ್ಸಿಯಂ ಜೊತೆಗೆ ಎ ಮತ್ತು ಸಿ ಜೀವಸತ್ವಗಳಿವೆ. ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗಿದೆ. ಇರುಳುಗಣ್ಣಿನ ತೊಂದರೆಯನ್ನು ನಿವಾರಿಸುತ್ತದೆ .ನುಗ್ಗೆ ಸೊಪ್ಪನ್ನು ನಿಮ್ಮ ಮನೆ ಮತ್ತು ಶಾಲೆಯ ಆವರಣದಲ್ಲಿ ಬೆಳೆಸಿರಿ . ಇವು ನುಗ್ಗೆ ಸೊಪ್ಪಿನ ಪ್ರಯೋಜನಗಳು.

X ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ . (3x2=6)

1. ಬಾಲಕಿ ಅತ್ತಿಮಬ್ಬೆಯಲ್ಲಿದ್ದ ಗುಣಗಳಾವುವು ? ಅತ್ತಿಮಬ್ಬೆ ವಿದ್ಯಾಪೋಷಿತೆಯಾಗಿ ಮಾಡಿದ ಕಾರ್ಯಗಳಾವುವು ?

ಉತ್ತರ : ಬಾಲಕಿ ಅತಿಮಬ್ಬೆ ಅತಿ ಚತುರೆ , ವಿನಯ, ವಿವೇಕ ಸಂಪನ್ನೆಯುಳ್ಳವ ಬಾಲಕಿಯಾಗಿದ್ದಳು ಇವು ಆಕೆಯ ಗುಣಗಳು.

ಅತ್ತಿಮಬ್ಬೆ ವಿದ್ಯಾಪೋಷಿತೆಯಾಗಿ ಗುರುಕುಲಕ್ಕೆ ಸಾಕಷ್ಟು ಧನ ಸಹಾಯ ಮಾಡಿದಳು .ವಿದ್ಯಾ ,ವಿನಯ ಸಂಪನ್ನೆ ಯಾದ ಅತ್ತಿಮಬ್ಬೆಯು ವಿದ್ಯಾ ಪ್ರಗತಿಗೆ ನೆರವಾಗಿ ವಿದ್ಯಾಪೋಷಿತೆಯೇ ಆದಳು ಎಂದು ಗುರು ವೃಂದವು ಕೊಂಡಾಡಿತು .

2. ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಯಾವುದರ ಮೇಳ ಏರ್ಪಟ್ಟಿತ್ತು ? ಅಂದು ಹೀರೇಕಾಯಿ ತನ್ನನ್ನು ಹೇಗೆ ಪರಿಚಯಿಸಿಕೊಂಡಿತು ?

ಉತ್ತರ : ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ತರಕಾರಿಗಳ ಮೇಳ ಏರ್ಪಟ್ಟಿತು.

" ಓ ನನ್ನ ಪ್ರೀತಿಯ ಸಹೋದರರೇ ನಾನು ಯಾರು ಬಲ್ಲಿರಾ ,ನನ್ನ ಮೈಬಣ್ಣ ಹಸಿರು. ನೋಡಿ ಮೈಯಲ್ಲಾ ಸುಕ್ಕುಗಟ್ಟಿದೆ. ನಾನು ಭಾರತದಲ್ಲಿಯೇ ಹುಟ್ಟಿದ್ದು ಚಪ್ಪರದ ಬಳಿಯಲ್ಲಿ ಜೋತು ಬೀಳುತ್ತೇನೆ. ನಾನೆಂದರೆ ನಿಮಗೆಲ್ಲ ತುಂಬಾ ಇಷ್ಟ. ನನ್ನ ಹೆಸರನ್ನು ಕೇಳಿದರೆ ಹಿರಿಹಿರಿ ಹೀಗ್ಗುತ್ತೀರಿ. ಈಗಲಾದರೂ ತಿಳಿಯುತ್ತದೆ ನಾನು ಯಾರೆಂದು . ನಾನೇ ಹೀರೆಕಾಯಿ ನನ್ನಲ್ಲಿ ಎ ಮತ್ತು ಸಿ ಅನ್ನಾಂಗದ ಜೊತೆಗೆ ಖನಿಜಾಂಶವಿದೆ. ಪಲ್ಯ, ಸಾಂಬಾರು, ಬಜ್ಜಿ ,ಬೊಂಡಗಳಲ್ಲಿ ನನ್ನನ್ನು ಬಳಸುತ್ತಾರೆ. ನಾನು ಜನರಿಗೆ ರುಚಿ ಹಾಗೂ ಆರೋಗ್ಯವನ್ನು ನೀಡುತ್ತೇನೆ ಎಂದು ಹೇಳಿ ಹೀರೇಕಾಯಿ ತನ್ನನ್ನು ಪರಿಚಯಿಸಿಕೊಂಡಿತು .

XI ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಡನೆ ವಿವರಿಸಿ . (3x2=6)

1. ಇಲ್ಲಿಗೆ ಬರುವುದಕ್ಕೆ ನಿಮಗೆ ಇಷ್ಟೊತ್ತು ಬೇಕಾಯಿತೇ ?

ಉತ್ತರ : ಈ ವಾಕ್ಯವನ್ನು ಗಿರೀಶ್ ತಾಳಿ ಕಟ್ಟೆಯವರು ರಚಿಸಿದ "ಅಂತಿಮ ವಿದಾಯ "ಎಂಬ ಪಾಠದಿಂದ ಆರಿಸಲಾಗಿದೆ .

ಈ ಮಾತನ್ನು ರೋಗಿಯ ತಂದೆ ವೈದ್ಯನಿಗೆ ಹೇಳಿದ ಮಾತಾಗಿದೆ . ಒಮ್ಮೆ ರೋಗಿಯ ತಂದೆಯು ತನ್ನ ಮಗನನ್ನು ಆಸ್ಪತ್ರೆಗೆ ಆತುರದಿಂದ ಕರೆದುಕೊಂಡು ಬಂದಾಗ ಅಲ್ಲಿ ವೈದ್ಯನನ್ನು ಕಾಣದೆ ತನ್ನ ಮಗನನ್ನು ಜೀವಂತವಾಗಿ ನೋಡುತ್ತೇನೋ ಇಲ್ಲವೋ ಎಂಬ ಆತಂಕದಿಂದ ಕೊಠಡಿಯ ಮುಂದೆ ಶತಪಥ ಹೆಜ್ಜೆ ಹಾಕುತ್ತಿರುವಾಗ ,ಬರುತ್ತಿದ್ದ ವೈದ್ಯನನ್ನು ಈ ಮೇಲಿನಂತೆ ಪ್ರಶ್ನಿಸಿದರು.

2. ದಾಸ್ಯದ ಅರಮನೆಗಿಂತ ಸ್ವಾತಂತ್ರ್ಯದ ಸೆರೆಮನೆಯೇ ಲೇಸು ?

ಉತ್ತರ : ಈ ವಾಕ್ಯವನ್ನು ಡಾ. ನಿಂಗು ಸೋಲಗಿ ಅವರು ರಚಿಸಿದ ಬಂಡೆದ್ದ ಮುಂಡರಗಿ ಭೀಮರಾಯ ಎಂಬ ಪಾಠದಿಂದ ಆರಿಸಲಾಗಿದೆ .

ಈ ಮಾತನ್ನು ಭೀಮರಾಯನು ಬ್ರಿಟಿಷ್ ಅಧಿಕಾರಿಗೆ ಹೇಳಿದನು. ಒಮ್ಮೆ ಭೀಮರಾಯನ ಸಂಗಡಿಗರು ಕೊಪ್ಪಳದ ಕೋಟೆಯ ಬಾಗಿಲನ್ನು ತೆರೆದಾಗ ಬ್ರಿಟಿಷರು ಕೋಟೆಯನ್ನು ವಶಪಡಿಸಿಕೊಳ್ಳಲು ಬಂದಾಗ ಭೀಮರಾಯನು ಬ್ರಿಟಿಷ್ ಅಧಿಕಾರಿಗೆ ಈ ಮೇಲಿನಂತೆ ಹೇಳಿದನು.



P.T.O

XII ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ .( ಒಂದಕ್ಕೆ) (4x1=4)

1. ಬೇಂದ್ರೆಯವರು ಶ್ರಾವಣದ ಪ್ರಾಕೃತಿಕ ಸೌಂದರ್ಯವನ್ನು ಯಾವ ರೀತಿ ವರ್ಣಿಸಿದ್ದಾರೆ ?

ಉತ್ತರ : ಶ್ರಾವಣ ಮಾಸ ಬಂತ್ತೆಂದರೆ ಮೈ ಮನಸ್ಸುಗಳು ಹಿಗ್ಗುತ್ತವೆ .ಪ್ರಕೃತಿಯಲ್ಲಾಗುವ ಬದಲಾವಣೆ ಮನುಷ್ಯನಿಗೆ ಮುದ ನೀಡುತ್ತದೆ .ಬೇಸಿಗೆಯ ಬಿಸಿಲ ಬೇಗೆಯಿಂದ ಬೆಂದ ಭೂಮಿ ,ವರ್ಷ ಋತುವಿನಿಂದ ತಂಪಾಗಿರುತ್ತದೆ. ಆಕಾಶವೆಲ್ಲ ಕಾರ್ಮುಗಿಲಿನಿಂದ ಕೂಡಿ ಸೂರ್ಯನೊಂದಿಗೆ ಸ್ಪರ್ಧೆ ನಡೆಸುತ್ತಿರುತ್ತದೆ .ಮಳೆಯ ಹನಿಗಳಿಂದ ಪ್ರಕೃತಿ ದೇವಿ ಮಿಂದು ನಳನಳಿಸಿರುತ್ತಾಳೆ . ಇಂತಹ ಶ್ರಾವಣ ಮಾಸದ ಕಾಡಿಗೆ , ಬೀಡಿಗೆ ಬರುತ್ತದೆ . ಬರುವಾಗಲೇ ಉತ್ಸಾಹ ಸಂಭ್ರಮಗಳನ್ನು ಹೊತ್ತು ತರುತ್ತದೆ .ಇಂತಹ ಶ್ರಾವಣ ಮಾಸದ ಮಳೆ ಸಮುದ್ರಕ್ಕೆ ರಾವಣ ಕುಣಿದ ತರಹ ಶುಭಗಳಿಗೆಯಲ್ಲಿ ಹೊಳೆ ಮತ್ತು ಮಳೆಗೆ ಲಗ್ನವಾಗುತ್ತದೆ . ಅದನ್ನೇ ತನ್ಮಯಳಾಗಿ ಭೂಮಿತಾಯಿ ನೋಡುತ್ತಿರುತ್ತಾಳೆ .ಹೀಗೆ ಊರಿಗೆ ,ಕೇರಿಗೆ ಬರುವ ಶ್ರಾವಣದ ಮಳೆಯನ್ನು ಎಲ್ಲರೂ ಸಂತೋಷ, ಸಂಭ್ರಮದಿಂದ ಆಹ್ವಾನಿಸಿ ಅದರಲ್ಲಿ ತಾವು ಒಂದಾಗುತ್ತಾರೆ. ಇಂತಹ ಸವಿಯನ್ನು ಇಂದಿನ ,ಮುಂದಿನ ಜನರು ಅನುಭವಿಸಿಲಿ ಎಂಬುದೇ ಕವಿಯ ಹಾರೈಕೆ .

( ಅಥವಾ )

2. ವೈದ್ಯ ಹಾಗೂ ರೋಗಿಯ ತಂದೆಯ ನಡುವೆ ಯಾವ ಮಾತುಕತೆಗಳು ನಡೆದವು ?

ಉತ್ತರ : ಒಮ್ಮೆ ರೋಗಿಯ ತಂದೆ ತನ್ನ ಮಗನನ್ನು ಉಳಿಸಿಕೊಳ್ಳಲು ವೈದ್ಯರಿಗಾಗಿ ಆಸ್ಪತ್ರೆಗೆ ಹೋಗಿದ್ದನು. ಸಮಯಕ್ಕೆ ಸರಿಯಾಗಿ ಬಾರದ ವೈದ್ಯನ ಮೇಲೆ ರೋಗಿಯ ತಂದೆಗೆ ಸಿಟ್ಟು ಬಂದಿತು. ಆಗ ವೈದ್ಯ ಆಪರೇಷನ್ ಥಿಯೇಟರ್ ಬಳಿ ಬಂದಾಗ ರೋಗಿಯ ತಂದೆ ಇಲ್ಲಿ ಬರುವುದಕ್ಕೆ ನಿಮಗೆ ಇಷ್ಟೊತ್ತು ಬೇಕಾಯಿತೆ. ನನ್ನ ಮಗನ ಜೀವ ಅಪಾಯದಲ್ಲಿರುವುದು ನಿಮಗೆ ತಿಳಿದಿಲ್ಲವೇ, ನಿಮಗೆ ಕಿಂಚಿತ್ತಾದರೂ ಜವಾಬ್ದಾರಿ ಇಲ್ಲವೇ .ಅವರ ಮಾತುಗಳನ್ನು ತಾಳ್ಮೆಯಿಂದ ಕೇಳಿದ ವೈದ್ಯ . ಕ್ಷಮಿಸಿ ನಾನು ಆಸ್ಪತ್ರೆಯಲ್ಲಿ ಇರಲಿಲ್ಲ. ನನಗೆ ಫೋನ್ ಬರುತ್ತಿದ್ದಂತೆ ಹೊರಟು ಬಂದಿದ್ದೇನೆ .ಸ್ವಲ್ಪ ಶಾಂತವಾಗಿ ನನ್ನ ಕೆಲಸ ಮಾಡಲು ಅನುವು ಮಾಡಿಕೊಡಿ ಈಗಾಗಲೇ ತಡವಾಗಿದೆ ಎಂದರು.

*******